ಮಲ್ಲಣ್ಣನೆಣುತಿ 'ಓಯ್ ಜಯಮ್ಮ ಅವು ಬರಿ ನಮ್ಮನೆ ಚರಂಡಿ ನೀರಲ್ಲಮ್ಮಯ್ಯ. ನಿನಗೆ ಕಣ್ಣು ನೆತ್ತಿ ಮ್ಯಾಲವ್ಕೊ ಮಖದ ಮ್ಯಾಲವ್ಕೊ? ನೆಟ್ಟಗೆ ನಿಗಾ ಮಾಡಿ ನೋಡಮ್ಮಯ್ಯ, ಅವು ಪಕ್ಕದ ಮನೆ ಚರಂಡಿ ನೀರಮ್ಮಣ್ಣಿ. ಏನ್ ಮಾಡೋದು ಅವರಬ್ರಾಳಾಗ ಅವರೆಲ್ಲು ಅರೇವಯಸ್ಕಳಾಕೆ ಜಾಗಿಲ್ಲವಂತೆ. ಎಷ್ಟು ಉಗುತ್ರು ಮಾನಗೇಟ್ಟ ಜನ ಅವರ್ ಉಂಡು ತಿಂದು ಉಗುಳಿರೊ ನೀರ್ನೆಲ್ಲ ನಮ್ಮನೆ ಬಾಗಲಿಗೆ ಬಿಡತ್ತಾರೆ. ನೋಡು ನಿನಗೆ ದಮ್ಮಿದ್ರೆ ನೆಟ್ಟಗೆ ಅವಳುಗು ಬುದ್ಧಿ ಹೇಳಂಗಿದ್ರೆ ಹೇಳು, ಇಲ್ಲಿ ನನ್ನೊಬ್ಬಳಿಗೆ ನಿನ್ನುಪದೇಶಾನ ಊದಾಕ್ ಬರ್ಬ್ಯಾಡ' ಅಂದವಳು ಅಲ್ಲಿಗೆ ಸುಮ್ಮನಾಗದೆ, 'ಓಹೋ ನಿಮ್ಮಿಬರ್‌ದು ಒಂದೇ ಜಾತಿಯಂತ ಅವಳಿಗೆ ಹೇಳೊ ಬದಲು ನನ್ನೊಬ್ಬಳಿಗೆ ಯಾಕೇಳಾಕ್ ಬಂದಿದ್ದೀಯಾ?' ಎಂದು ಕಕ್ಕುಲಾತಿಲಿ ಹುಟ್ಟಿಕೊಂಡ ಮಾತು ಮುಲಾಜಿನಾಚೇಲಿ ದಾಟಿಬಿಡತು ಜಾತಿಗೆ ಹೋಲಿಸಿಕೊಂಡ ಅವಳ ಬಾಯಾಗಿನ ಮಾತು ಬೇರಿಂಗಡವಾಗಿ (ತಾರತಮ್ಯ) ಕಕ್ಕುತ್ತಿರುವ ಈ ಸಮೇವಿನೊಳಗೆ.

ಮಲ್ಲಣ್ಣನೆಂಡತಿ ಮ್ಯಾಲೆ ಪಕ್ಕದ ಮನೆ ಸಿದ್ಲಿಂಗನ ಹೆಂಡತಿ ಎಲ್ಲಿದ್ದಳೊ ಏನೊ, ಬರ ಬರನೆ ಬಂದವಳು 'ಇದ್ಯಾಕೆ ಸುಕುನಾತಿ ಬಂದೋರಿಗೆಲ್ಲ ನನ್ನ ಮ್ಯಾಲೆ ಪುಂಗೂತ್ತೀಯಾ? ನಿಮ್ಮನೆ ನಿರನ್ನೆಲ್ಲ ನಿನ್ ನೆತ್ತಿ ಮ್ಯಾಲೆ ಸುರಕಂಡಿದ್ದೀಯೇನೆ? ನೀವು ಉಗಿಯೊ ನೀರು ಇಲ್ಲೇ ತಾನೆ ಉಳ್ಯಾಡೋದು? ಈ ಕಾಗಮ್ಮ ಗೂಗಮ್ಮನ ಪಾಠ ಯಾರುಗು ಹೇಳಬ್ಯಾಡ ಮೈಮ್ಯಾಲೆ ಗ್ಯಾನ ನೆಟ್ಟಗಿರಲಿ ಬೋಸೂಡಿ' ಎಂದು ಇಬ್ಬರ ಮಾತಿಗೆ ಮಾತು ಬ್ರಹ್ಮಾಂಡವಾಗಿ ಬೆಟ್ಟವಾಗಿ, ಸಿಡಿಲಾಗಿ, ಗುಡುಗಾಗಿ, ಲಟಿಪಿಟನೆ ಕಾಲು ಕೆರಕೊಂಡು ಜಗಳದ ಸುರಿಮಳೆ ನಿಲ್ಲದಾಯಿತು. ಅಲ್ಲೆ ನಿಂತು ನೋಡುತ್ತಿದ್ದ ಜಯಮ್ಮ ಪಿಳಪಿಳನೆ ಕಣ್ಣು ಪಿಳುಕಿಸಿಕೊಂಡು ಇಬ್ಬರಿಗೂ ಬುದ್ಧಿ ಹೇಳಿ ಹೇಳಿ ಸ್ವರ ಸದ್ದಿಲ್ಲದೆ ಸುಸ್ತಾಗಂಗಾಯಿತು. ಅವಳು ನಿಲ್ಲಾತನಕ ನಿಂತವಳು ತೆಪ್ಪಗೆ ಮರೆಯಾಗಿಬಿಟ್ಲು ಅಂತ ಜಗಳವೆಂಬೋದು ಇನ್ನು ಸರಿಯಾಗಿನಿಲ್ಲದೆ ಜಡಿಮಳೆಯಂತೆ ಇಬ್ಬರು ಎದುರು ಬದುರಾದಗಲೆಲ್ಲ ತೊಟತೊಟನೆ ತೊಟ್ಟಿಕ್ಕುವ ಜಗಳವಾಗಿ, ನೆನ್ನೆ ದಿನ ಕೆರೆ ಬಯಲಲ್ಲಿ ದನ ಮೇಯಿಸುವಾಗ ಜಯಮ್ಮನ ಗಂಡ ನರಸಿಂಹನ ಕೂಟೆ, 'ನೋಡ್ಲ ನರಸಿಂಹ ನಿನ್ನೆಂಡತಿಗೆ ಅದ್ಯಾರ್ ಆಶಾ ಕಾರ್ಯಕರ್ತೆಯೆಂಬೊ ಕೆಲಸ ಕೊಟ್ರೊ ಏನೊ? ನಿಮ್ಮ ಜಯಿಯಿಂದಾನೆ ಕಣೊ ನನಗು ಅವಳುಗು ಹತ್ತಿರೊ ಜಗಳ ಇವತ್ತಿಗೂ ಹರದಿಲ್ಲ, ಏನಪ್ಪಯ್ಯ ನಿನ್ನೆಂಡ್ರೊಬ್ಬಳೆ ಸಾಮ್ರಾಜ್ಯಾನ ಸರ್ ಮಾಡಂಗವಳೆ ರವಷ್ಟು ಅಡಕ್ ವಾಗಿರಾಕೇಳ್' ಎಂದು ಫಿಟಿಂಗಿಟ್ಟವಳೆ.

ಜಯಮ್ಮನಿಗೆ ನೆಟ್ಟಗಿರೊ ಗಂಡ ಸಿಗಲಿಲ್ಲ. ಅವನೊಬ್ಬ ತಲೆ ಹಿಡುಕ್ ನನಮಗ. ಅವನ ರೂಲ್ಸೇನಂದರೆ ಹೆಣುತಿ ಕೆಲಸಕ್ಕೋಗ್ ಬೇಕು. ಆದ್ರೆ ಯಾರ್ ಮನೆತಾಕು ಹೋಗಂಗಿಲ್ಲ, ಯಾವ್ ಗಂಡಸ್ರುಕೂಟು ಮಾತಾಡಂಗಿಲ್ಲ ಯಾರ್ ಕೂಟು ಹೆಚ್ಚಾಗಿ ಮಾತಾಡಂಗಿಲ್ಲ. ತಿಂಗಳಾಗತಿದ್ದಂಗೆ ಸಂಬಳಮಾತ್ರ ಒಂದು ರೂಪಾಯಿಯು ಹೆಚ್ಚು ಕಮ್ಮಿಯಾಗ್‌ದಂಗೆ ನೆಟ್ಟಗೆ ಎಣಿಸಿಕೊಡಬೇಕು. ಅವನು ಮಾತ್ರ ದುಡ್ಡಿಲ್ಲ ದುಡಿಮೆಯಿಲ್ಲ ಅನ್ನಂಗ್ ಬಾಳಾತಾ ಇರೋನ ನಡುವೆ ಇಷ್ಟೇ ಸಾಲದೆಂಬಂತೆ ಊರಲ್ಲಿರುವ ಕಳಾಂಜಿ ಸಂಘದಲ್ಲು, ಚೌಡೇಶ್ವರಿ ಸಂಘದಲ್ಲು ಸಾಲ ತಗಸಿಕೊಟ್ಟವಳೆ. ಆ ಲೋನು ಮಾಡಿಸಿ ಕೊಡೊವರುಗು ಇವನು ನರಸಿಂಹನೆಂಬೋನು ಜಯಮ್ಮನ ಕಾಲಿಡದವನಲ್ಲ, ಕೈಹಿಡದವನಲ್ಲ ಈಗ್ ನೋಡೀರೆ ಒಂದುಕಾಸು ಕಟ್ಟದೇ ಯಾಮಾರಸತಾ ಅವನೆ. ಬರೋ ಸಂಬಳವನ್ನೆಲ್ಲ ಇವನಿಗೆ ಮುಕ್ಕಾಗದಂಗೆ ಕೊಡಬೇಕು, ಬೇಕಾದ್ದು ಬ್ಯಾಡವಾದದ್ದಕ್ಕೆಲ್ಲ ಇವನ ಮುಂದೆ ಕೈವೊಡ್ಡಬೇಕು. ಇಂತ ನಾರ್ದ ನನಮಗ ನರಸಿಂಹನೆಂಬೋನು ದಿನವು ಸುಮಾರಾಗಿ ಕುಡಿಯುತ್ತಿದ್ದವನು. ಈಗೀಗ ಜಾಸ್ತಿ ಕುಡುದು ಬಂದು ಜಯಮ್ಮನೊಡನೆ ಕಾರಣವಿಲ್ಲದ ಕಾರಣಗಳಿಗೆ ಕಾಲುಕೆರೆದು ಜಗಳಾನು ಮಾಡತ್ತಾನೆ. ಸುಮ್ಮು ಸುಮ್ಮನೆ ಹಿಡಕಂಡಿಡಕಂಡು ಹೊಡಿತಾನು ಅವನೆ.

ಇಸ್ಕೂಲಿನತ್ತಿರ ಪ್ರತಿ ದಿವಸವು ಭೇಟಿ ಕೊಡಲು ಬರುತ್ತಿರುವ ಜಯಮ್ಮನನ್ನು ಆ ಎಡ್ ಮೇಡಮ್ಮನವರು ಮಾತ್ರ 'ಬಾರಮ್ಮ ಜಯ ತಿಂಡಿ ಏನ್ ತಿಂದಮ್ಮ? ಕೂತ್ಕಳಮ್ಮ' ಅಂತಾರೆ. 'ಬಿಡ್ರಿ ಮೇಡಮ್‌ನವರೇ ಚೇರೇನು ಬ್ಯಾಡಾ